# ಊಸರವಳ್ಳಿ ಕ್ಷಣಕ್ಕೊಂದು ಬಣ್ಣ

■ ಸೌಮ್ಯಾ ಅಭಿನಂದನ್ ಬೀಳೂರು



**ಊಸರವಳ್ಳಿ ಅಥವಾ ಗೋಸುಂಬೆ ತನ್ನ ನಿಜಗುಣಕ್ಕಿಂತ ವಂಚನೆಯ ಸಂಕೇತವಾಗಿಯೇ ಜನಪ್ರಿಯ. ಬಣ್ಣ ಬದಲಾಯಿಸುವ ಅವುಗಳ ಪ್ರಕೃತಿದತ್ತ ಶಕ್ತಿ ಮನುಷ್ಯನ ಸಣ್ಣತನಗಳ ಸಂಕೇತವಾಗಿ ಬಳಕೆಯಾಗುತ್ತದೆ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಸಿಗುವ ಗೋಸುಂಬೆಗಳ ಕುರಿತಾಗಿ ಹಲವು ಅಚ್ಚರಿಯ ವಿವರಗಳು ಇಲ್ಲಿವೆ.**

ಪ್ರಕೃತಿ ಒಂದು ವರ್ಣಮಯ ಜಗತ್ತು. ಎಲ್ಲಿ ನೋಡಿದರು ಬಣ್ಣ ಬಣ್ಣ. ವಿವಿಧ ವರ್ಣಗಳ ಹೂವು, ಚಿಗುರೆಲೆಗಳು, ಚಿಟ್ಟೆಗಳು, ಬೆಟ್ಟ ಗುಡ್ಡಗಳ ತಿಳಿ ನೀಲಿ, ಮುಂಜಾನೆ–ಮುಸ್ಸಂಜೆಯ ಚಿತ್ತಾರದ ನಸುಗೆಂಪು, ಮಿಂಚುಹುಳುಗಳ ಬೆಳಕಿನಾಟ, ಹೀಗೆ ಹತ್ತು ಹಲವು ಬಗೆಯ ಪ್ರಕೃತಿಯ ರಂಗಿನಾಟದ ನಡುವೆ ಆಧುನಿಕ ಬದುಕು ಬಣ್ಣಹೀನವೇ ಸರಿ. ಸುತ್ತಲಿನ ಪರಿಸರದಲ್ಲಿ ಸುಮ್ಮನೆ ಒಂದು ಸುತ್ತು ಹಾಕಿ ಬಂದರೆ ಸಾಕು, ಊಹೆಗೂ ನಿಲುಕದಷ್ಟು ಬಣ್ಣಗಳು ಕಣ್ಣುತುಂಬುತ್ತವೆ. ನಮಗೆ ತಿಳಿದಿರುವುದು ಬೆರಳೆಣಿಕೆಯ ಬಣ್ಣಗಳಷ್ಟೆ, ಅದಕ್ಕೂ ಹೊರತಾಗಿ ಇರುವ ಬಣ್ಣಗಳನ್ನು ನಾವು ಗುರುತಿಸಲು ಸಾಧ್ಯವಿಲ್ಲ. ಏಕೆಂದರೆ ಆ ಬಣ್ಣಗಳು ನಿಸರ್ಗದ ಸೊಬಗಿನಲ್ಲಿ ವಿಲೀನವಾಗಿರುತ್ತವೆ. ಆಳವಾಗಿ ಪ್ರಕೃತಿಯೊಂದಿಗೆ ಬೆರೆತಾಗ ಮಾತ್ರ ನಮಗವು ಅರಿವಿಗೆ ಬರುತ್ತವೆ.

ಬಣ್ಣ ಮರೆಮಾಚುವಿಕೆಯು ಜೀವಿಗಳು ತಮ್ಮ ಪರಿಸರದೊಂದಿಗೆ ಹೊಂದಿಕೊಳ್ಳಲು, ಬೇರೆ ಜೀವಿಗಳೊಡನೆ ಬೆರೆಯಲು, ಪರಭಕ್ಷಕಗಳಿಂದ ತಪ್ಪಿಸಿಕೊಳ್ಳಲು, ಸ್ಥಳ, ಗುರುತು ಮತ್ತು ಚಲನೆಯನ್ನು ಮರೆಮಾಚಲು ಹಾಗೂ ಆಹಾರ ಬೇಟೆಗಾಗಿ ನಡೆಸುವ ಒಂದು ನೈಸರ್ಗಿಕ ಪ್ರಕ್ರಿಯೆ. ಇದನ್ನು 'ರಹಸ್ಯ ಬಣ್ಣ' ಎಂದು ಕರೆಯುತ್ತಾರೆ. ಈ ಬಣ್ಣ ಬದಲಾಯಿಸುವಿಕೆ ಜೀವಿಗಳ ಬಾಹ್ಯ ಮತ್ತು ಆಂತರಿಕ ಲಕ್ಷಣಗಳ ಮೇಲೆ ಆಧಾರವಾಗಿರುತ್ತದೆ ಇಲ್ಲವೇ ಪರಭಕ್ಷಕ ಜೀವಿಗಳ ಇರುವಿಕೆಯ ಮೇಲೆ ಅವಲಂಬಿತವಾಗಿರುತ್ತದೆ ಮತ್ತು ಅವುಗಳ ರಕ್ಷಣೆಗೂ ಸಹಾಯವಾಗುತ್ತದೆ. ಈ ನಡವಳಿಕೆಯು ಮುಖ್ಯವಾಗಿ ಊಸರವಳ್ಳಿಯಲ್ಲಿ ಕಂಡುಬರುತ್ತದೆ.

ಊಸರವಳ್ಳಿ ಅಥವಾ ಗೋಸುಂಬೆಯ ವೈಜ್ಞಾನಿಕ ಹೆಸರು **Chameleon zeylanicus.**